ಮಾಷ್ಟ್ರಾಗುತ್ತಾನೆ ಎಂದು ಅತ್ತೆ ಹೇಳಿದ್ದು ಸಂತೋಷವೇ. ಅದಕ್ಕಿಂತ ಹೆಚ್ಚಿನ ಕೆಲಸವೊಂದು ಇರಬಹುದು ಎನ್ನುವುದು ಆಕೆಯ ನಿಲುಕಿಗೂ ಸಿಗದಂತಹುದು.

***

ಆದರೆ ಆ ಮೊಮ್ಮಗ ಮಾತ್ರ ಮಾಷ್ಟರಾಗುವುದು ಹೋಗಲಿ. ಯಾವುದಕ್ಕೂ ಲಾಯಕ್ಕಿಲ್ಲ ಎನ್ನುವುದು ಈ ಅಜ್ಜಿಗೆ ಮತ್ತು ಅವಳ ಮೂಲಕ ಆ ತಾಯಿಗೆ ತಿಳಿಯಲು ಬಹಳ ಕಾಲವೇ ಬೇಕಾಗಿತ್ತು. ಕಾಲೇಜು ಕಲಿಯುತ್ತಿದ್ದಾನೆ ಒಂದು ದಿನ ಮಾಷ್ಟ್ರಾಗುತ್ತಾನೆ ಎಂದು ಇವರೆಲ್ಲ ತಿಳಿದಿದ್ದ ಅವ ಒಂದು ದಿನ ದಿಡೀರನೆ ಊರಿಗೆ ಬಂದಿದ್ದ. ಬರುವಾಗ ಹೆಗಲಿಗೊಂದು ಚೀಲ. ಮುಖದ ಮೇಲೆ ತಿಂಗಳುಗಳ ಕಾಲ ಬೆಳೆಸಿದ ಗಡ್ಡ ಮೀಸೆ. `ಹುಷಾರಿಲ್ಲವೇನೋ ಮಗಾ ಎಂದು ಕೇಳಿದ ತಾಯಿಯೆಡೆಗೆ ಹೆದರಿಕೆ ಹುಟ್ಟಿಸುವಂತಹ ವಿಚಿತ್ರ ನಗುವಿನ ನೋಟ ಬೀರಿದ್ದ. ಅಂತಹುದಕ್ಕೆಲ್ಲ ಹೆದರದ ಅಜ್ಜಿ ಕೆದಕಿ ಕೇಳಿದರೆ `ನಿನಗೆಂತದು ಗೊತ್ತಾಗುತ್ತದೆ.. ಅಜ್ಜಿ. ಈ ಊರು ಬಿಟ್ಟು ಹೋಗದ ನಿನಗೆ ಹೊರಗಡೆ ಏನು ನಡೆಯುತ್ತದೆಯೆಂದು ತಿಳಿದಿದೆಯೇ. ಇದೆಲ್ಲ ನಿನಗೆ ಬೇಡದ ವಿಷಯ ಎಂದಿದ್ದ. ತಾನು ಎಷ್ಟು ಭರವಸೆಯಿಟ್ಟುಕೊಂಡ ಮೊಮ್ಮಗ. ತಾನು ತಣ್ಣೀರು ಕುಡಿದು ತನ್ನ ಪಾಲಿನ ಕೂಳನ್ನು ಅವನ ಬಾಯಿಗೆ ತುರುಕಿ ಮುದ್ದಿನಿಂದ ಸಾಕಿದ ಮೊಮ್ಮಗ ಈಗ ಹೀಗೆ ತನ್ನನ್ನು ಕಡೆಗಣಿಸುವುದೆಂದರೆ. ಗಂಡ ಮತ್ತು ಮಗ ಸತ್ತಾಗಲೂ ಆಗದ ದುಃಖ ಈಗ ವೆಂಕಜ್ಜಿಗೆ. ಆದರೆ  ಅದು ಗಟ್ಟಿ ಜೀವ. ಎಂದೂ ತನ್ನೊಳಗಿನ ಅಳಲನ್ನು ಹೊರಗೆ ತೋರಿಸಿಕೊಂಡವಳಲ್ಲ. ಅದೂ ಈ ಮೊಮ್ಮಗನೆದುರಿಗೆ ಸೋಲುವುದೇ. ಅಳುವನ್ನು ತಡೆ ಹಿಡಿದು `ಯಾಕೋ ಹಾಗಂತೀಯ ಮಗು. ಪಟ್ಟಣಕ್ಕೆ ಹೋಗಿ ಬಂದ ಕೂಡಲೇ ನಮ್ಮನ್ನೆಲ್ಲ ಮರೆತೇ ಬಿಟ್ಟೆಯೋ ಹೇಗೆ ಅದಕ್ಕೂ ಆ ಮೊಮ್ಮಗನದ್ದು ಅದೇ ಉತ್ತರ. `ಇನ್ನೂ ಊರಿಗೆ ಬಂದದ್ದಷ್ಟೆ. ಸ್ವಲ್ಪ ಸುಧಾರಿಸಿಕೊಳ್ಳಲಿ ಎಂದು ಅಜ್ಜಿ ತಾನೇ ಸುಮ್ಮನಾಗಿತ್ತು. ಹೆಗಲಿಗಿದ್ದ ಚೀಲವನ್ನು ಅಲ್ಲೇ ಮನೆಯ ಚಾವಡಿಯ ಮೇಲೆ ಬಿಸಾಡಿದವ `ಮಗೂ ಹೊಟ್ಟೆಗೇನಾದರೂ ಹಾಕಿಕೊಂಡು ಹೋಗು ಎಂದು ತಾಯಿ ಅಲವತ್ತುಕೊಳ್ಳುತ್ತಿದ್ದುದು ಕಿವಿಯ ಮೇಲೆ ಬೀಳಲೇ ಇಲ್ಲವೇನೋ ಎನ್ನುವಂತೆ ಹೊರ ಹೋಗಿದ್ದ. ಮತ್ತೆ ಹಿಂತಿರುಗಿ ಬಂದದ್ದು ರಾತ್ರಿ ಜಾವ ಎರಡು ಜಾವ ಕಳೆದ ಮೇಲೆಯೇ.

ದಿನವೆಲ್ಲ ಎಲ್ಲಿಗೆ ಹೋಗಿದ್ದನೆಂದು ಯಾರಿಗೂ ತಿಳಿಯದು. ಆದರೆ ಊರ ನಡುವಿನ ದಾರಿಯಲ್ಲಿ ನಡೆದು ಹೋಗುವುದನ್ನು ನೋಡಿದವರಿದ್ದಾರೆ. ಹಳೆಯ ಗುರುತಿನ ನೆನಪಿನಿಂದ ಕ್ಷೇಮ ಸಮಾಚಾರ ವಿಚಾರಿಸಿ ಅದೇ ವಿಕಟನಗೆಯ ನಗುವನ್ನು ಉತ್ತರವಾಗಿ ಪಡೆದವರಿದ್ದಾರೆ. ಆದರೆ ಊರ ದಾರಿಯ ತುದಿಯನ್ನು ಮುಟ್ಟಿದ ಅವನು ಮುಂದೆ ಎಲ್ಲಿಗೆ ಹೋದ ಎನ್ನುವುದು ಮಾತ್ರ ಯಾರಿಗೂ ಗೊತ್ತಿರಲಿಲ್ಲ.

ಅದು ಒಂದೇ ದಿನಕ್ಕೆ ನಿಲ್ಲಲಿಲ್ಲ. ಮುಂದೆ ಪ್ರತಿದಿನ ಬೆಳಿಗ್ಗೆ ಎದ್ದವ ಅಮ್ಮ ಕಾಫಿ ರೆಡಿ ಮಾಡಿಟ್ಟಿದ್ದರೆ ಕುಡಿದ. ಇಲ್ಲದಿದ್ದರೆ ಅದೂ ಇಲ್ಲ. ತಿಂಡಿಯ ವಿಷಯವಂತೂ ಕೇಳಲೇ ಬೇಡಿ. ಮನೆಯಿಂದ ಹೊರಟರೆ ಅದೇ ದಾರಿ.

ಊರ ದಾರಿಯ ತುದಿಯನ್ನು ತಲುಪಿ ಮತ್ತೆ ಮಾಯ. ಮಧ್ಯಾಹ್ನದ ಊಟ ದೇವರಿಗೇ ಗೊತ್ತು. ರಾತ್ರಿ ಎಷ್ಟೋ ಹೊತ್ತಿನ ಮೇಲೆ ಊರೆಲ್ಲ ಮಲಗಿದ ಮೇಲೆ ಅದೇ ದಾರಿಯಲ್ಲಿ ತಿರುಗಿ ಬರುತ್ತಿದ್ದ. ಕಳ್ಳ ಹೆಜ್ಜೆಯನ್ನಿಡುತ್ತ ಅಗುಳಿ ಹಾಕದ ಬಾಗಿಲನ್ನು ನೂಕಿಕೊಂಡು ಮನೆಯೊಳಗೆ ಬರುತ್ತಿದ್ದ. ಇವನಿಗಾಗಿಯೇ ಕಾಯುತ್ತಿದ್ದ ಅಮ್ಮ ಅಜ್ಜಿಯರ ಮುಖದ ಮೇಲಿನ ಪ್ರಶ್ನಾರ್ಥಕ ನೋಟ ಆ ಮಸುಕಾಗಿ ಉರಿಯುತ್ತಿದ್ದ ಚಿಮಿಣಿ ಎಣ್ಣೆಯ ದೀಪದ ಬೆಳಕಿನಲ್ಲಿ ಇವನನ್ನು ಇರಿದರೂ ಗಮನಿಸುತ್ತಿರಲಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಚಾಪೆಯ ಸುರುಳಿ ಬಿಡಿಸಿಕೊಂಡು ಮಲಗುತ್ತಿದ್ದ. ಎಲ್ಲಾದರೂ ಅಪರೂಪಕ್ಕೊಮ್ಮೆ ಆ ಚಿಮಿಣಿ ದೀಪವನ್ನು ದೊಡ್ಡದು ಮಾಡಿಕೊಂಡು ಬಗಲಿನ ಚೀಲದಿಂದ ತೆಗೆದ ಪುಸ್ತಕಗಳನ್ನು ಓದುವುದೋ ಅದರಲ್ಲಿ ಏನಾದರೂ ಬರೆಯುವುದೋ ಇತ್ತು. ಅದನ್ನು ನೋಡುತ್ತಿದ್ದ ಅಜ್ಜಿ ಮತ್ತು ಅಮ್ಮನಿಗೆ ಮಗು ಮಧ್ಯಾಹ್ನ ಏನು ತಿಂದಿತೋ ರಾತ್ರಿ ಊಟ ಮಾಡಿತೋ ಇಲ್ಲವೋ ಎನ್ನುವ ಚಿಂತೆಯೇ ಹೊರತು ಅವನೇನು ಓದುತ್ತಾನೆ ಬರೆಯುತ್ತಾನೆ ಎನ್ನುವುದರ ಬಗ್ಗೆಯಲ್ಲ. ಒಂದು ವೇಳೆ ಅದರ ಬಗ್ಗೆ ಚಿಂತೆ ಮಾಡಿದ್ದರೂ ಅವರಿಗೇನು ತಿಳಿಯುತ್ತದೆ ಮಣ್ಣು. ಪುನಃ ಮಾರನೇ ಬೆಳಿಗ್ಗೆ ಅದರದ್ದೇ ಪುನರಾವರ್ತನೆ.

***

ಊರ ವಚನ ಕುತೂಹಲಿಗಳು ಮಾತನಾಡಿಕೊಳ್ಳುತ್ತಿದ್ದರು. `ವೆಂಕಜ್ಜಿಯ ಮೊಮ್ಮಗ ಅದೇನೋ ಚಳುವಳಿಗೆ ಸೇರಿದ್ದಾನಂತೆ. ಕಾಲೇಜಿನಲ್ಲಿದ್ದಾಗಲೇ ಅದು ಯಾರದ್ದೋ ಜೊತೆ ಸೇರಿ ಶುರು ಮಾಡಿದ್ದಂತೆ. ಇಲ್ಲಿಂದ ಹೋದವ ಮೂರು ತಿಂಗಳೂ ಸರಿಯಾಗಿ ತರಗತಿಗಳಿಗೆ ಹಾಜರಾಗದೆ ಈ ಚಳುವಳಿ ಅದು ಇದೂ ಎಂದು ಓಡಾಡುತ್ತಿದ್ದವನನ್ನು ನಾಲ್ಕನೇ ತಿಂಗಳೇ ಕಾಲೇಜಿನಿಂದ ಒದ್ದು ಹೊರಗಟ್ಟಿದ್ದರಂತೆ. ಆಗಲೇ ಯಾರು ಯಾರೊಂದಿಗೋ ಸಂಪರ್ಕ ಬೆಳೆಸಿ ಕೊಂಡವ ಈಗ ದೊಡ್ಡ ಲೀಡರೇ ಆಗಿದ್ದಾನಂತೆ ಎಂದು. ಆದರೆ ಅದನ್ನು ಅಜ್ಜಿಯ ಹತ್ತಿರ ಬಂದು ಹೇಳಿದವರಿಲ್ಲ. ಒಂದು ವೇಳೆ ಹೇಳಿದ್ದರೂ ತನ್ನ ಬೊಚ್ಚು ಬಾಯಿ ಬಿಟ್ಟುಕೊಂಡ ಅಜ್ಜಿ ಅವ ಬೆಳಿಗ್ಗೆ ಏನೂ ತಿಂಡಿ ತಿನ್ನದೆ ಮನೆಯಿಂದ ಹೋದದ್ದರ ಬಗ್ಗೆ ತನ್ನ ಸಂಕಟವನ್ನು ತೋಡಿಕೊಂಡಿದ್ದೀತೇ ವಿನಃ ಅವರಾಡುವ ಮಾತಿಗೆ ಉತ್ತರ ಕೊಡುತ್ತಿರಲಿಲ್ಲ. ಇನ್ನೂ ಒತ್ತಿ ಹೇಳಿದರೆ `ಅದೆಲ್ಲ ನನಗೆಲ್ಲಿ ಗೊತ್ತಾಗುತ್ತದೆ ಮಗಾ.. ನನ್ನ ಮೊಮ್ಮಗನ ಜೀವಕ್ಕೇನು ಅಪಾಯವಿಲ್ಲ ತಾನೇ.. ಅಲ್ಲ ಒಂದು ದಿನ ಅವ ಮಾಷ್ಟ್ರಾಗಲಿಕ್ಕೆ ತೊಂದರೆ ಇಲ್ಲ ಅಲ್ಲವೇ... ಎಂದು ಕೇಳಿದ್ದೀತು.

`ಊರ ಹೊರಗಿನ ದಟ್ಟ ಕಾಡಿನಲ್ಲಿ ಅವನಂತೆಯೇ ಇರುವ ಹತ್ತಿಪ್ಪತ್ತು ಜನರು ಸೇರಿಕೊಳ್ಳುತ್ತಾರೆ. ಕ್ರಾಂತಿಯ ಮಾತಾಡುತ್ತಾರೆ. ರಕ್ತ ಹರಿಯಬೇಕು ಎನ್ನುತ್ತಾರೆ. ಅದನ್ನು ತಾವೇ ಹರಿಸಬೇಕು ಎಂದೂ ಹೇಳುತ್ತಿದ್ದಾರೆ. ಅವರಲ್ಲಿ ನಿರುದ್ಯೋಗಿಗಳು ಕೆಲವರಿದ್ದರೆ ಸರಕಾರೀ ಉದ್ಯೋಗದಲ್ಲಿದ್ದವರು ಸ್ವಂತ ಉದ್ಯೋಗ ಮಾಡಿಕೊಂಡವರೂ ಇದ್ದಾರೆ ಎಂದೆಲ್ಲ ಹೇಳುತ್ತಿದ್ದರು. `ಹಾಗೆ ಸೇರುವ ಆ ಗುಂಪಿನಲ್ಲಿ ಒಬ್ಬೊಬ್ಬರೂ ಒಂದೊಂದು ತರ. ಆದರೆ ಎಲ್ಲರ ಮಾತಿನ ಸಾರಾಂಶವೂ ಒಂದೇ. ಬದುಕು ಹಳಸಿದೆ. ಈ ವ್ಯವಸ್ಥೆಯಲ್ಲಿ ಸಿಕ್ಕಿಬಿದ್ದ ಸಮಾಜ ಸಿಂಬಳದಲ್ಲಿ ಸಿಕ್ಕಿದ ನೊಣದಂತೆ ಹೊರಬರಲಾರದೆ ಒದ್ದಾಡುತ್ತಿದೆ. ಅದಕ್ಕೆ ಮುಕ್ತಿ ಬೇಕು. ಆಮೂಲಾಗ್ರ ಕ್ರಾಂತಿಯಾಗದೆ ಅದು ಸಾಧ್ಯವಿಲ್ಲ..... ಹೀಗೇ ಏನೇನೋ.... ಅದನ್ನೆಲ್ಲ ಇವರು ಹೇಗೆ ಕೇಳಿಸಿಕೊಂಡರು. ಇವರೂ ಅವರ ಹಿಂದೆಯೇ ಕಾಡಿಗೆ ಹೋಗಿದ್ದರೇ. ಇವರು ಗಮನಿಸುತ್ತಿದ್ದುದನ್ನು ಕಂಡೂ ಆ ಮಾತುಗಳನ್ನೆಲ್ಲ ಆಡಿದರೇ.. ಇದಕ್ಕೆ ಉತ್ತರವಿರಲಿಲ್ಲ. ಹಾಗೆಂದು ಮಾತನ್ನು ಆಡುವವರು ನಿಲ್ಲಿಸುವುದೂ ಇಲ್ಲ. ಕೇಳುವವರು ಕಿವಿ ನಿಮಿರಿಸಿ ಕೇಳುವುದನ್ನು ಬಿಡುವುದೂ ಇಲ್ಲ. ಆದರೆ ಒಮ್ಮೆ `ಇನ್ನು ಕ್ರಾಂತಿಯ ಬಗ್ಗೆ ಮಾತು ಸಾಕು ನಾವು ಕಾರ್ಯ ಪ್ರವರ್ತರಾಗಬೇಕು ಎನ್ನುವ ಮಾತನ್ನು ಆಡುತ್ತಿದ್ದರು ಎಂಬ ವಿಷಯ ಕೇಳಿ ಬಂದ ದಿನ ಅದನ್ನು ಹೇಳಿದ ಮತ್ತು ಕೇಳಿದ ಇಬ್ಬರಿಗೂ ಎದೆಯಲ್ಲಿ ಡವ ಡವ ಸುರುವಾಗಿತ್ತು.

ಸದಸ್ಯರ ಸಂಖ್ಯೆ ಹೆಚ್ಚು ಮಾಡಬೇಕು. ಹೊಸ ಕಾರ್ಯಕರ್ತರುಗಳನ್ನು ನೋಂದಾಯಿಸಬೇಕು. ಸಂಘಟನೆ ಬಲಪಡಿಸಬೇಕು. ಪ್ರತಿ ಹಳ್ಳಿಯಲ್ಲಿ, ಪ್ರತಿ ಓಣಿಗಳಲ್ಲಿ ಕಾರ್ಯಕರ್ತರಿರಬೇಕು. ಹತ್ತಿಪ್ಪತ್ತು ಮನೆಗಳಿಗಾದರೂ ಒಬ್ಬ ಸದಸ್ಯನಿರಲೇಬೇಕು. ಇಡೀ ಊರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬೇಕು ಎಂದು ಆ ಮೊಮ್ಮಗನೇ ಹೇಳುತ್ತಿದ್ದ ಎಂಬುದನ್ನು ಕೇಳಿದ ದಿನವಂತೂ ಊರಿನ ಹೆಚ್ಚಿನವರು ತಮ್ಮ ಮಕ್ಕಳ ಬಗ್ಗೆ ಜಾಗ್ರತೆ ವಹಿಸಬೇಕೆಂದು ತಮ್ಮ ತಮ್ಮೊಳಗೇ ಮಾತಾಡಿಕೊಂಡಿದ್ದರು.

ಮೊಮ್ಮಗ ಊರಿಗೆ ಬಂದು ತಿಂಗಳೆರಡು ತಿಂಗಳು ಕಳೆದಿತ್ತು. ಸುರುವಾಗಿತ್ತು ದಿನ ಬೆಳಗಾದರೆ ಮನೆಯ ಎದುರಿಗೆ ಜನರ ಸಾಲು. ದೂರಿನ ಮೇಲೆ ದೂರು.

`ಅದೇನೋ ಚಳವಳಿಗೆ ಸೇರಿದ್ದಾನಂತೆ. ನನ್ನ ಮಗ ನಾಳೆಯಿಂದ ಕಾಲೇಜಿಗೆ ಹೋಗುವುದಿಲ್ಲ ಎನ್ನುತ್ತಿದ್ದಾನೆ'.

`ನಿನ್ನೆ ನನ್ನ ಮಗನನ್ನು ಕರೆದುಕೊಂಡು ಹೋಗಿದ್ದ. ಕೋತಿ ತಾನು

## ವೇದನೆ

ಅವಳು ಸಿಕ್ಕಳು
ನೋಡಿ ನಕ್ಕಳು
ಪ್ರೇಮ ನಿವೇದನೆ ಮಾಡಿ
ಕೊಳ್ಳಲಾಗಲಿಲ್ಲ ನಾನು
ಪುಕ್ಕಲು!

★ ಕಾಸರಗೋಡು ಅಶೋಕ್ ಕುಮಾರ್



ಈಶ್ವರ